3. ರೈತರು ಬೆಳೆದ ಉತ್ಪನ್ನಗಳಿಗೆ ಮಧ್ಯವರ್ತಿರಹಿತ ಯೋಗ್ಯ ಬೆಲೆ ಹಾಗೂ ದಲ್ಲಾಳಿ ಶುಲ್ಕವಿಲ್ಲದೆ ಗ್ರಾಹಕರಿಗೆ ಯೋಗ್ಯ ದರದಲ್ಲಿ ತಾಜಾ ಹಣ್ಣು ಮತ್ತು ತರಕಾರಿಗಳು ದೊರೆಯುವ ವ್ಯವಸ್ಥೆ.
4. ರೈತರಿಗೆ ಹುಟ್ಟುವಳಿ ಮಾರಾಟವಾದ ತಕ್ಷಣ ಹಣ ಸಂದಾಯ.
5. ಹಣ್ಣು ಮತ್ತು ತರಕಾರಿಗಳ ಕರಾರುವಕ್ಕಾದ ತೂಕ ಮಾಡಲು ಸಮಿತಿಯಿಂದ ತಕ್ಕಡಿಗಳ ಸರಬರಾಜು ಹಾಗೂ ಕ್ರೇಟ್ಸ್ ಒದಗಿಸುವುದು.
6. ಹಣ್ಣು ಮತ್ತು ತರಕಾರಿಗಳ ಗುಣಮಟ್ಟ ಹಾಗೂ ಸ್ವಚ್ಛತೆಯನ್ನು ಕಾಪಾಡುವುದು.
7. ಪ್ರತಿದಿನವು ಕೃಷಿ ಉತ್ಪನ್ನಗಳ ಬೆಲೆಯನ್ನು ಸ್ವತಃ ರೈತರೇ ನಿರ್ಧರಿಸುವುದು.

ಈ) 1. ಯಲಹಂಕ ರೈತರ ಸಂತೆ – ರೂ. 100.00 ಲಕ್ಷ
2. ಹುಬ್ಬಳ್ಳಿ ಸಂತೆ – ರೂ. 33.00 ಲಕ್ಷ
3. ಚಿತ್ರದುರ್ಗ – ರೂ. 10.00 ಲಕ್ಷ

ಬೆಂಗಳೂರಿನ ಲಾಲ್‌ಬಾಗ್ ಬಟಾನಿಕಲ್ ಗಾರ್ಡನ್ ಅನ್ನು ಬಿ.ಡಿ.ಎ.ಗೆ ವಹಿಸುವ ಬಗ್ಗೆ

2327(3075) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಪ್ರತಿಷ್ಠಿತ ಬಟಾನಿಕಲ್ ಗಾರ್ಡನ್ ಆದ ಲಾಲ್‌ಬಾಗ್ ಅನ್ನು ಬಿ.ಡಿ.ಎ.ಗೆ ವಹಿಸಲಾಗಿದೆಯೆ ಅಥವಾ ಹಸ್ತಾಂತರಿಸಲಾಗಿದೆಯೆ;

ಆ) ಹಾಗಿದ್ದಲ್ಲಿ ಅದರ ವಿವರಗಳೇನು;

ಇ) ಲಾಲ್‌ಬಾಗ್ ಮಟ್ಟಿಗೆ ಬಿ.ಡಿ.ಎ. ಪಾತ್ರವೇನು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ಅಜೆಂಡಾ ಟಾಸ್ಕ್‌ಫೋರ್ಸ್ ಸಹಯೋಗದೊಂದಿಗೆ ತನ್ನಲ್ಲಿರುವ ಸಂಪನ್ಮೂಲ ಬಳಸಿಕೊಂಡು ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್ ಉದ್ಯಾನವನಗಳನ್ನು ಭೌತಿಕವಾಗಿ ಹಾಗೂ ಸ್ಥಾನಿಕವಾಗಿ ಅಭಿವೃದ್ಧಿಪಡಿಸಲು ಆದೇಶಿಸಿದೆ.

ರಾಜ್ಯದ ಅಂಗನವಾಡಿ ಕಟ್ಟಡಗಳ ಮಾಹಿತಿ ಕುರಿತು

2328(3044) : ಶ್ರೀ ಬಚ್ಚೇಗೌಡ ಬಿ.ಎನ್. (ಹೊಸಕೋಟೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೆ;

ಆ) ಈ ದಿಸೆಯಲ್ಲಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೆ; ಸಲ್ಲಿಸಿದ್ದರೆ, ಎಷ್ಟು ಬೇಡಿಕೆ ಇಡಲಾಗಿದೆ; ಉಡುಪಿ ಜಿಲ್ಲೆಯ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಬೇಡಿಕೆ ಸಲ್ಲಿಸಲಾಗಿದೆ;

ಇ) ರಾಜ್ಯದಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳಿವೆ; ಎಷ್ಟು ಸ್ವಂತ ಕಟ್ಟಡಗಳಿವೆ;

ಈ) ಅಂಗನವಾಡಿ ಕೇಂದ್ರದ ಕಟ್ಟಡಗಳನ್ನು ನಿರ್ಮಾಣ ಮಾಡಲು ಕೈಗೊಂಡಿರುವ ಕ್ರಮಗಳೇನು;